## ಶಿಕ್ಷಕರಿಗೆ ಸೌಲಭ್ಯಗಳು

**1. ಶಿಕ್ಷಕರಿಗೆ ಕಲ್ಯಾಣ ನಿಧಿ :**

- ❖ ಶಿಕ್ಷಕರಿಗೆ ಖಾಯಿಲೆ ಸ್ವರೂಪದ ಆಧಾರದ ಮೇಲೆ ರೂ 3000 ರಿಂದ 10,000 ದವರೆಗೆ ಧನ ಸಹಾಯ ಲಭ್ಯವಿದೆ.
- ❖ ಚಿಕಿತ್ಸೆ ಪಡೆಯಬಹುದಾದ ಹಾಗು ಸರ್ಕಾರದಿಂದ / ಶಿಕ್ಷಕರ ಕಲ್ಯಾಣ ನಿಧಿಯಿಂದ ಅನುಮೋದನೆಯಿರುವ ಆಸ್ಪತ್ರೆಗಳ ಪಟ್ಟಿ ಶಿಕ್ಷಕರ ಕಲ್ಯಾಣ ನಿಧಿ ಕಛೇರಿಯಲ್ಲಿ ಹಾಗೂ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಲಭ್ಯವಿರುತ್ತದೆ.
- ❖ ಶಿಕ್ಷಕರು ಸೇವೆಯಲ್ಲಿದ್ದಾಗ ನಿಧನರಾಗಿದ್ದು, ಕುಟುಂಬ ವೇತನ ಮಂಜೂರಾಗದಿದ್ದಲ್ಲಿ ಶಿಕ್ಷಕರ ಅವಲಂಬಿತರಿಗೆ 5,000 ರೂಗಳ ಧನಸಹಾಯ ನೀಡುವುದು.
- ❖ ಶಿಕ್ಷಕರ ಮಕ್ಕಳ ಉನ್ನತ ವ್ಯಾಸಾಂಗಕ್ಕೆ ಸಹಾಯ ಧನ ನೀಡುವುದು. ಒಂದು ವರ್ಷದಲ್ಲಿ ಒಂದು ಮಗುವಿಗೆ ಮಾತ್ರ ಈ ಸಹಾಯ.
    - ❖ ಪಿ.ಯು.ಸಿ ವ್ಯಾಸಾಂಗಕ್ಕೆ ರೂ. 200–00
    - ❖ ಬಿ.ಎ./ಬಿ.ಎಸ್ಸಿ./ಬಿ.ಕಾಂ. ರೂ. 300–00
    - ❖ ಪಾಲಿಟೆಕ್ನಿಕ್/ಬಿ.ಇಡಿ./ಎಲ್.ಎಲ್.ಬಿ ರೂ. 400–00
    - ❖ ಬಿ.ಎಸ್.ಸಿ (ಡಿಗ್ರಿ), ಬಿ.ಫಾರ್ಮ ರೂ. 500–00
    - ❖ ಬಿ.ಇ/ಎಂ.ಬಿ.ಬಿ.ಎಸ್./ಬಿ.ವಿ.ಎಸ್.ಸಿ/ಬಿ.ಡಿ.ಎಸ್ ರೂ. 1000.00
- ❖ ಶಿಕ್ಷಕರ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿ ವೇತನ (ಕನಿಷ್ಟ ಶೇ. 60 ಅಂಕ ಗಳಿಸಿರಬೇಕು).
    - ❖ ಎಸ್.ಎಸ್.ಎಲ್.ಸಿ – ರೂ. 500–00
    - ❖ ಪಿ.ಯು.ಸಿ 2ನೇ ವರ್ಷ – ರೂ. 1,000–00
    - ❖ ಪದವಿ ಅಂತಿಮ ವರ್ಷ – ರೂ. 1,500–00
    - ❖ ತಾಂತ್ರಿಕ ಪದವಿ ಅಂತಿಮ ವರ್ಷ0 – ರೂ. 1,500–00
    - ❖ ಸ್ನಾತಕೋತ್ತರ ಪದವಿ ಮೊದಲ ವರ್ಷ – ರೂ. 2,000–00

- ❖ ಪ್ರಶಸ್ತಿಗಳು
    - ❖ ಜಿಲ್ಲಾ ಮಟ್ಟದ ಶಿಕ್ಷಕರ ಪ್ರಶಸ್ತಿ – ರೂ. 2,000–00
    - ❖ ಶೈಕ್ಷಣಿಕ / ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿದವರಿಗೆ (ರಾಜ್ಯ ಮಟ್ಟದ ಪ್ರಶಸ್ತಿ) ರೂ. 4,000–00
    - ❖ ದಿ|| ರಾಜೀವ್ ಗಾಂಧಿ ಸ್ಮಾರಕ ಪ್ರಶಸ್ತಿ (ರಾಜ್ಯಮಟ್ಟದ) ರೂ. 10,000–00 (ಇಬ್ಬರು ವಿಜ್ಞಾನ ಶಿಕ್ಷಕರಿಗೆ ತಲಾ)
    - ❖ ಸಾಹಿತ್ಯ / ಸಾಂಸ್ಕೃತಿಕ ಪ್ರಶಸ್ತಿ (ಸಂಗೀತ/ಅಶುಭಾಷಣ/ಪ್ರಬಂಧ/ಸ್ಥಳದಲ್ಲೇ ಬೋಧನಾ ಸಲಕರಣೆ ತಯಾರಿಕೆ)

| | | |
|---|---|---|
| ರಾಜ್ಯಮಟ್ಟದಲ್ಲಿ | ಪ್ರಥಮ | ರೂ. 1,000–00 |
| | ದ್ವಿತೀಯ | ರೂ. 750–00 |
| | ತೃತೀಯ | ರೂ. 500–00 |

- ❖ ಸುರಕ್ಷಾ ವಿಮೆ : ಅಪಘಾತ / ದುರ್ಘಟನೆಗೆ ತುತ್ತಾದ ಶಿಕ್ಷಕರಿಗೆ / ವಿದ್ಯಾರ್ಥಿಗಳಿಗೆ / ಅವಲಂಬಿತರಿಗೆ ರೂ. 500 ರಿಂದ ರೂ. 25,000 ದವರೆಗೆ ಸಹಾಯಧನ ನೀಡುವುದು.

- ತಾಲ್ಲೂಕು ಕೇಂದ್ರಗಳಲ್ಲಿ ಗುರುಭವನ ನಿರ್ಮಾಣಕ್ಕೆ ರೂ. 5 ಲಕ್ಷದವರೆಗೂ ಸಹಾಯಧನ ನೀಡುವುದು.
- ಬೆಂಗಳೂರಿನಲ್ಲಿ ಸುಸಜ್ಜಿತ ಶಿಕ್ಷಕರ ಸದನದಲ್ಲಿ ಶಿಕ್ಷಕರಿಗೆ ರಿಯಾಯಿತಿ ದರದಲ್ಲಿ ವಸತಿ ಸೌಲಭ್ಯ ಕಲ್ಪಿಸಿದೆ.
- ಪ್ರತಿ ವರ್ಷ ಸದಸ್ಯತ್ವ ಶುಲ್ಕ ಪಾವತಿಗೆ ಬದಲಾಗಿ ಅಜೀವ ಸದಸ್ಯತ್ವ :
  ದಿ : 31–3–98ರ ಮೊದಲು ನೇಮಕವಾದವರಿಗೆ ರೂ. 300–00
  ದಿ : 31–3–1998ರ ನಂತರ 31–3–2002ರ ಮೊದಲು ನೇಮಕವಾದವರಿಗೆ ರೂ. 500–00
  ದಿ : 1–4–2002ರ ನಂತರ ನೇಮಕವಾದವರಿಗೆ ರೂ. 1,000–00

**ಶಿಕ್ಷಕರಿಗೆ ರಜಾ ಸೌಲಭ್ಯಗಳು** :

- ಸರ್ಕಾರಿ ನೌಕರರಿಗೆ ರಜೆಯು ಒಂದು ಸೌಲಭ್ಯವೇ ಹೊರತು ಹಕ್ಕಲ್ಲ.
- ಸಾಂದರ್ಭಿಕ ರಜೆ – ಕೆ.ಸಿ.ಎಸ್.ಆರ್. ರಜಾ ನಿಯಮ ಪ್ರಕಾರ ಒಂದು ಕ್ಯಾಲೆಂಡರ್ ವರ್ಷದಲ್ಲಿ 15 ದಿನ ಸಾಂದರ್ಭಿಕ ರಜೆ ಸೌಲಭ್ಯ. ಒಂದು ಬಾರಿ 7 ದಿನಗಳಿಗಿಂತ ಹೆಚ್ಚು ಸಾಂದರ್ಭಿಕ ರಜಾ ಪಡೆಯುವಂತಿಲ್ಲ.
- ಗಳಿಕೆ ರಜೆ : KCSR 112 ನಿಯಮದ ಪ್ರಕಾರ ವರ್ಷದಲ್ಲಿ 10 ದಿನಗಳು ಗರಿಷ್ಠ ಮಿತಿ 240 ದಿನಗಳು. ಮಂಜೂರಾತಿ ಪ್ರಾಧಿಕಾರ – ಕ್ಷೇತ್ರ ಶಿಕ್ಷಣಾಧಿಕಾರಿಗಳು.
- ನಿರ್ಬಂಧಿತ ರಜೆ : ಕ್ಯಾಲೆಂಡರ್ ವರ್ಷದಲ್ಲಿ ಪಟ್ಟಿಯಲ್ಲಿ ನಮೂದಿಸಿರುವ ದಿನಗಳಲ್ಲಿ ಯಾವುದಾದರೂ 2 ದಿನಗಳು ಮಾತ್ರ.
- ಅಸಾಧಾರಣ ರಜೆ : ತೀವ್ರ ಸ್ವರೂಪದ ಖಾಯಿಲೆ / ಅಂಗವೈಕಲ್ಯ ಅಥವಾ ಉನ್ನತ ವ್ಯಾಸಂಗಕ್ಕಾಗಿ ಅಗತ್ಯಕ್ಕೆ ತಕ್ಕಂತೆ ಮಂಜೂರು ಮಾಡಿಸಿಕೊಳ್ಳಬಹುದು.
- ನಾಯಿ ಕಡಿತಕ್ಕೆ ವಿಶೇಷ ಸಾಂದರ್ಭಿಕ ರಜೆ : ಗರಿಷ್ಟ 14 ದಿವಸಗಳು.
- ಪ್ರಸೂತಿ ರಜೆ : KCSR 135(1) ನಿಯಮದಂತೆ ವಿವಾಹಿತ ಮಹಿಳಾ ಶಿಕ್ಷಕರಿಗೆ 135 ದಿನಗಳು. ಮೊದಲ ಮತ್ತು 2ನೇ ಹೆರಿಗೆಗೆ ಮಾತ್ರ.
  ಗರ್ಭಪಾತವಾದಾಗಲೂ ಸಹ, ವೈದ್ಯರ ಶಿಫಾರಸ್ಸಿನ ಮೇರೆಗೆ ಗರಿಷ್ಠ 6 ವಾರಗಳವರೆಗೆ ಈ ರಜೆ ಪಡೆಯಬಹುದು.
- ಪಿತೃತ್ವ ರಜೆ : KCSR ನಿಯಮದ 135 B ಪ್ರಕಾರ ಪತ್ನಿಗೆ ಹೆರಿಗೆಯಾದಾಗ ಅವರ ಯೋಗಕ್ಷೇಮ ನೋಡಿಕೊಳ್ಳಲು ಶಿಕ್ಷಕರಿಗೆ 15 ದಿನಗಳ ಪಿತೃತ್ವ ರಜೆ ನೀಡಿದೆ.
- ಗಳಿಕೆ ರಜೆ ನಗದೀಕರಣ : 2 ವರ್ಷಗಳ ಒಂದು ಬ್ಲಾಕ್ ಅವಧಿಯಲ್ಲಿ ಒಮ್ಮೆ ಮಾತ್ರ ಗರಿಷ್ಠ 30 ದಿನಗಳಿಗೆ ಮೀರದಂತೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಿಸಿ ವೇತನ ಪಡೆದುಕೊಳ್ಳಬಹುದು.
  ನಿವೃತ್ತಿಯಾದಾಗ ಅವರ ಜೊತೆಯಲ್ಲಿರುವ ಗಳಿಕೆ ರಜೆಯನ್ನು 240 ದಿನಗಳಿಗೆ ಮೀರದಂತೆ ನಗದೀಕರಣ ಮಾಡಿಕೊಳ್ಳಬಹುದು.

ಪಿಂಚಣಿ ಸೌಲಭ್ಯಗಳು :

- ನಿವೃತ್ತಿ ವೇತನ :

$$\frac{\text{ಸೇವೆಯ ಅಂತಿಮ ತಿಂಗಳ ಮೂಲ ವೇತನ}}{2} \times \frac{\text{ಅರ್ಹತಾ ಸೇವೆ (ಅರ್ಧ ವರ್ಷಗಳಲ್ಲಿ)}}{66}$$

❖ ಕುಟುಂಬ ನಿವೃತ್ತಿ ವೇತನ : ಅಂತಿಮ ವೇತನ :

ರೂ. 4,050ಕ್ಕಿಂತ ಕಡಿಮೆ ಇದ್ದಲ್ಲಿ ಅಂತಿಮ ವೇತನದ ಶೇ. 30 (ಕನಿಷ್ಟ 1055)
ರೂ. 4,050ರಿಂದ 8000 ಇದ್ದಲ್ಲಿ ಅಂತಿಮ ವೇತನದ ಶೇ. 20 (ಕನಿಷ್ಟ 1215)
ರೂ. 8,000ಕ್ಕಿಂತ ಹೆಚ್ಚಿದ್ದಲ್ಲಿ ಅಂತಿಮ ವೇತನದ ಶೇ. 15 (ಕನಿಷ್ಟ 1600)
ಮುಕ್ತ ಗರಿಷ್ಠ – ರೂ. 3,381

❖ ಕಮ್ಯುಟೇಶನ್ (ನಿವೃತ್ತಿ ವೇತನ) :

ನಿವೃತ್ತಿ ವೇತನದ ಕಮ್ಯುಟೇಶನ್ ಭಾಗ X ಕಮ್ಯುಟೇಶನ್ ಫ್ಯಾಕ್ಟರ್ (10.46) X 12 (ಗರಿಷ್ಠ ಮಿತಿ ನಿವೇಶನದ 1/3 ಭಾಗ)

❖ ಗ್ರಾಚ್ಯುಯಿಟಿ (ನಿವೃತ್ತಿಯಾದಾಗ) :

$$\text{ಅಂತಿಮ ಮೂಲವೇತನ} \times \frac{\text{ಅರ್ಹತಾ ಸೇವೆ (ಅರ್ಧ ವರ್ಷಗಳಲ್ಲಿ)}}{4}$$

(ತುಟ್ಟಿ ಭತ್ಯೆ ಇಲ್ಲ, ಗರಿಷ್ಠ ಮಿತಿ ರೂ. 2.5 ಲಕ್ಷಗಳು)

❖ ಗ್ರಾಚುಯಿಟಿ (ನಿಧನರಾದಾಗ) :

- ❖ ಅರ್ಹತಾ ಸೇವೆ 1 ವರ್ಷಕ್ಕಿಂತ ಕಡಿಮೆ ಇದ್ದಲ್ಲಿ ಅಂತಿಮ ವೇತನದ 2 ರಷ್ಟು
- ❖ ಅರ್ಹತಾ ಸೇವೆ 1 ರಿಂದ 5 ವರ್ಷಗಳಿದ್ದಲ್ಲಿ ಅಂತಿಮ ವೇತನದ 6 ರಷ್ಟು
- ❖ ಅರ್ಹತಾ ಸೇವೆ 6 ರಿಂದ 20 ವರ್ಷಗಳಿದ್ದಲ್ಲಿ ಅಂತಿಮ ವೇತನದ 12 ರಷ್ಟು
- ❖ ಅರ್ಹತಾ ಸೇವೆ 20ಕ್ಕಿಂತ ಹೆಚ್ಚು ವರ್ಷಗಳಲ್ಲಿದ್ದಲ್ಲಿ 20 ವರ್ಷಗಳ ಮೇಲ್ಪಟ್ಟ ಅವಧಿಗೆ ಪ್ರತಿ 6 ತಿಂಗಳಿಗೆ ಅಂತಿಮ ವೇತನದ ಅರ್ಧದಷ್ಟು.
  (ಗರಿಷ್ಠ ಮಿತಿ ರೂ. 2.5 ಲಕ್ಷಗಳು)

This document was created with Win2PDF available at http://www.daneprairie.com.
The unregistered version of Win2PDF is for evaluation or non-commercial use only.